# BRUHAT BENGALURU MAHANAGARA PALIKE

**Office of the Executive Engineer, Road Infrastructure-Mahadevapura,Divison, Annex Building-3,1stFloor, B.B.M.P, N.R Square, Bengaluru-560 002,**
**Email:** roadinfrastructuremahadevapura@gmail.com


No: EE/RI/M-PURA/PR/ 438/2021-22 Date:27/8/2021

## UNDERTAKING FOR SUBMISSION OF FRA-2006

**Subject:** Diversion of 0.99Ha of Forest and in Survey No: 52 & 53 of Panathur Village, Varthuru 2 Hobli, Survey No:109 of Gunjurpalya Village, Varthuru 1 Hobli, Bengaluru East Taluk, Bengaluru Urban District for Widening and Formation of 30.00Mtrs Wide Road from Kundalahalli (Old Airport Road) to Gunjur Palya via BWSSB Treatment Plant (Road upto Gunjurpalya Main Road) as per RMP-2015, In favour of Executive Engineer Road Infrastructure Mahadevapura Division **#105, 1ST Floor, Annex Building-3, NR square, BBMP Bengaluru Urban district -560 002- Reg**

**Ref: (1) Online Application No:** 143079/2021, Dated: 06/06/2021

**(2) E- Office File No:** KFD/HoFF/A5-4(GFL)/ 18/2021-FC, Dated: 29/07/2021

********

I/We Bruhat Bengaluru Mahanagara Palike (ULB) herewith giving undertaking that we have written a letter to the DC (Bengaluru Urban District) under Form-A of FRA -2006 to give the appropriate letter regarding the Habitat on the allignment of the above mentioned road. As and when we received the letter from the DC (Bengaluru Urban District) will submit the same to your kindself.

Executive Engineer
Road Infrastructure – Mahadevapura Division
Bruhat Bengaluru Mahanagara Palike

Scanned with CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರರ ಕಛೇರಿ, ರಸ್ತೆ ಮೂಲಭೂತ ಸೌಕರ್ಯ, ಹೊಸ ಅನೆಕ್ಸ್ ಕಟ್ಟಡ-3, 4ನೇ ಮಹಡಿ, ಬೃ.ಬೆ.ಮ.ಪಾಲಿಕೆ, ಎನ್.ಆರ್.ಚೌಕ, ಬೆಂಗಳೂರು-02

ಸಂಖ್ಯೆ: ಮು.ಅ/ರ.ಮೂ.ಸೌ/ಪಿ.ಆರ್/ 835/21-22 ದಿನಾಂಕ: 18/8/2021

ರವರಿಗೆ,

ಜಿಲ್ಲಾಧಿಕಾರಿಗಳು
ಬೆಂಗಳೂರು ನಗರ ಜಿಲ್ಲೆ
ಕೆ.ಜಿ.ರಸ್ತೆ, ಬೆಂಗಳೂರು

ಮಾನ್ಯರೇ,

ವಿಷಯ:ಮಹದೇವಪುರ ವಲಯ ವ್ಯಾಪ್ತಿಯಲ್ಲಿನ ಆರ್.ಎಂ.ಪಿ–2015 ರಂತೆ 30.00 ಮೀಟರ್ ಅಗಲದ ರಸ್ತೆ ನಿರ್ಮಾಣಕ್ಕೆ ಉದ್ದೇಶಿತ ಸ್ವಾಧೀನಪಡಿಸಿಕೊಳ್ಳುತ್ತಿರುವ ಪಣತ್ತೂರು ಗ್ರಾಮದ ಸರ್ವೇ ನಂ.52,53 ಮತ್ತು ಗುಂಜೂರು ಗ್ರಾಮ ಸರ್ವೇ ನಂ. 109 ರಜಮೀನಿನ ಸಂಬಂಧ ಅರಣ್ಯ ಹಕ್ಕು ಕಾಯ್ದೆ–2006 ರ ಫಾರಂ–ಎ ನೀಡುವ ಬಗ್ಗೆ

ಉಲ್ಲೇಖ: 1.ಅಧಿಸೂಚನೆ ಸಂಖ್ಯೆ: ಬಿಬಿಎಂಪಿ/ಆಯುಕ್ತರು/ಪಿಎಸ್ಆರ್(ಜಿ)/1154/18-19, ದಿನಾಂಕ: 13/07/2018
2. ಅರಣ್ಯ ಇಲಾಖೆಯ ಆನ್ ಲೈನ್ ಪ್ರಸ್ತಾವನೆ ಸಂಖ್ಯೆ:FA/KA/Road/143079/2021 ದಿನಾಂಕ:06/06/2021

********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಹದೇವಪುರ ವಲಯ ವ್ಯಾಪ್ತಿಯ ಕುಂದಲಹಳ್ಳಿಯಿಂದ ಬಿ.ಡಬ್ಲ್ಯೂ ಎಸ್.ಎಸ್.ಬಿ ತ್ಯಾಜ್ಯ ಸಂಸ್ಕರಣಾ ಘಟಕದ ಮುಖಾಂತರ ಗುಂಜೂರುಪಾಳ್ಯ ಮುಖ್ಯ ರಸ್ತೆಗೆ ಸಂಪರ್ಕಿಸುವ ರಸ್ತೆಗೆ ಆರ್.ಎಂ.ಪಿ–2015 ರಂತೆ 30.00 ಮೀಟರ್ ಅಗಲದ ರಸ್ತೆ ನಿರ್ಮಾಣ ಮಾಡಲು ಉಲ್ಲೇಖದ ಅನ್ವಯ ಅಧಿಸೂಚನೆ ಹೊರಡಿಸಿ ಭೂ–ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಪ್ರಸ್ತಾಪಿತ ರಸ್ತೆಯನ್ನು ನಿರ್ಮಿಸಲು 2019-20ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆ ಅಡಿಯಲ್ಲಿ ರೂ.10.00 ಕೋಟಿಗಳ ಅನುದಾನಕ್ಕೆ ಅನುಮೋದನೆಯಾಗಿದ್ದು, ಟೆಂಡರ್ ಗುತ್ತಿಗೆ ಅನುಸಾರ ಗುತ್ತಿಗೆಯನ್ನು ವಹಿಸಿ ಕಾಮಗಾರಿಯನ್ನು ಪ್ರಾರಂಭಿಸಿ ಪ್ರಗತಿಯಲ್ಲಿರುತ್ತದೆ.

ಬೆಂಗಳೂರು ಪೂರ್ವ ತಾಲ್ಲೂಕು ವರ್ತೂರು ಹೋಬಳಿ ಪಣತ್ತೂರು ಗ್ರಾಮದ ಸರ್ವೆ ನಂ.52,53ರಲ್ಲಿ ಮತ್ತು ಗುಂಜೂರು ಗ್ರಾಮದ ಸರ್ವೆ ನಂ 109ರ ಮುಖಾಂತರ ಪ್ರಸ್ತಾಪಿತ ರಸ್ತೆಯು ಹಾದು ಹೋಗುತ್ತಿದ್ದು, ಸದರಿ ಪಣತ್ತೂರು ಗ್ರಾಮದ ಸರ್ವೆನಂ. 52 ರಲ್ಲಿ 6787.13 ಚ.ಮೀ, ಮತ್ತು ಸರ್ವೆ ನಂ.53 ರಲ್ಲಿ 325.73 ಚ.ಮೀ, ಮತ್ತು ಗುಂಜೂರು ಗ್ರಾಮದ ಸರ್ವೆ ನಂ 109 ರಲ್ಲಿ 2788.24 ಚ.ಮೀ ವಿಸ್ತೀರ್ಣವು ರಸ್ತೆ ನಿರ್ಮಾಣಕ್ಕೆ ಅವಶ್ಯವಿದ್ದು, ಸದರಿ ಸ್ವತ್ತು ಅರಣ್ಯ ಇಲಾಖೆಯ ಸುಪರ್ದಿಯಲ್ಲಿರುವುದಾಗಿ ತಿಳಿದು ಬಂದಿರುತ್ತದೆ.

19 AUG 2021
DEPUTY COMMISSIONER OFFICE
BANGALORE DIST. BANGALORE

Scanned with CamScanner

ಪ್ರಸ್ತಾಪಿತ ರಸ್ತೆಯ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಮೇಲೆ ತಿಳಿಸಿರುವ ಸರ್ವೆ ನಂಬರುಗಳ ಮುಖಾಂತರ ರಸ್ತೆ ಪಥವು ಹಾದು ಹೋಗುತ್ತಿದ್ದು, ರಸ್ತೆ ನಿರ್ಮಾಣಕ್ಕಾಗಿ ಭೂ-ಸ್ವಾಧೀನ ಪ್ರಕ್ರಿಯೆಯ ಸಂಬಂಧ ಅರಣ್ಯ ಇಲಾಖೆರವರನ್ನು ಸಂಪರ್ಕಿಸಲಾಗಿ, *ಅರಣ್ಯ ಹಕ್ಕು ಕಾಯ್ದೆ-2006ರ ಭಾಗ-1ರ, ಫಾರಂ-ಎ,* ಸಲ್ಲಿಸುವ ಬಗ್ಗೆ ಮುಚ್ಚಳಿಕೆ ನೀಡಲು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು ವರ್ತೂರು ಹೋಬಳಿ ಪ್ರಸ್ತಾಪಿತ ಪಣತ್ತೂರು ಗ್ರಾಮದ ಸರ್ವೆ ನಂ.52,53ರಲ್ಲಿ ಮತ್ತು ಗುಂಜೂರು ಗ್ರಾಮದ ಸರ್ವೆ ನಂ 109ರಲ್ಲಿ ಅರಣ್ಯ ಪ್ರದೇಶದಲ್ಲಿ ಅರಣ್ಯ ವಾಸಿಗಳು ವಾಸವಾಗಿಲ್ಲದಿರುವ ಬಗ್ಗೆ ಅರಣ್ಯ ಹಕ್ಕು ಕಾಯ್ದೆ-*2006*ರ ಅನ್ವಯ ಫಾರಂ-ಎ ಅನ್ನು ನೀಡಲು ಈ ಮೂಲಕ ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

[signature] 17/8/2021

ಮುಖ್ಯ ಅಭಿಯಂತರರು
ರಸ್ತೆಮೂಲಭೂತ ಸೌಕರ್ಯ

ಪ್ರತಿಯನ್ನು:

1. ಮುಖ್ಯ ಆಯುಕ್ತರು, ಬಿಬಿಎಂಪಿ,ರವರ ಅವಗಾಹನೆಗಾಗಿ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಅಧೀಕ್ಷಕ ಅಭಿಯಂತರರು (ರಮೂಸೌ) ರವರ ಮಾಹಿತಿಗಾಗಿ
4. ಕಾರ್ಯಪಾಲಕ ಅಭಿಯಂತರರು (ರಮೂಸೌ-ಮಹದೇವಪುರ) ರವರ ಅಗತ್ಯ ಕ್ರಮಕ್ಕಾಗಿ
5. ಕಛೇರಿ ಪ್ರತಿ

Scanned with CamScanner

ಕರ್ನಾಟಕ ಸರ್ಕಾರ

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಕೆ.ಜಿ.ರಸ್ತೆ, ಬೆಂಗಳೂರು**

---

ನಂ:ಎಲ್ಎನ್‌ಡಿ (ಪೂ)ಸಿಆರ್:144/21-22 ದಿನಾಂಕ:15.09.2021.

**ರವರಿಗೆ:**

ತಹಶೀಲ್ದಾರ್,
ಬೆಂಗಳೂರು ಪೂರ್ವ ತಾಲ್ಲೂಕು,
ಬೆಂಗಳೂರು.

**ಮಾನ್ಯರೇ,**

**ವಿಷಯ:-** ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಪಣತ್ತೂರು ಗ್ರಾಮದ ಸ.ನಂ.52, 53 ಮತ್ತು ಗುಂಜೂರು ಗ್ರಾಮದ ಸ.ನಂ.109 ರ ಜಮೀನಿನಲ್ಲಿ ರಸ್ತೆ ಅಗಲೀಕರಣಕ್ಕೆ ಜಮೀನು ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ.

**ಉಲ್ಲೇಖ:-** ಮುಖ್ಯ ಅಭಿಯಂತರರು, ರಸ್ತೆ ಮೂಲಭೂ ಸೌಕರ್ಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರ ಪತ್ರ ಸಂ:ಮು.ಅ/ರ.ಮೂ.ಸೌ/ಪಿಆರ್:835/2021-22, ದಿನಾಂಕ:18.08.2021.

******

ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಪಣತ್ತೂರು ಗ್ರಾಮದ ಸ.ನಂ.52, 53 ಮತ್ತು ಗುಂಜೂರು ಗ್ರಾಮದ ಸ.ನಂ.109 ರ ಜಮೀನಿನಲ್ಲಿ ರಸ್ತೆ ಅಗಲೀಕರಣಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗುತ್ತಿದ್ದು, ಸದರಿ ಜಮೀನು ಅರಣ್ಯ ಇಲಾಖೆಗೆ ಸೇರಿದೆಂದು ತಿಳಿದು ಬಂದಿರುವುದರಿಂದ, ಈ ಪ್ರದೇಶದಲ್ಲಿ ಅರಣ್ಯ ವಾಸಿಗಳು ವಾಸವಾಗಿರುವುದಿಲ್ಲರುವ ಬಗ್ಗೆ ಅರಣ್ಯ ಹಕ್ಕು ಕಾಯ್ದೆ 2006 ರನ್ವಯ ಫಾರಂ-ಎ ನೀಡಲು ಕೋರಿರುತ್ತಾರೆ.

ಪ್ರಯುಕ್ತ, ಉಲ್ಲೇಖಿತ ಪತ್ರವನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ, ಸದರಿ ಪತ್ರದಲ್ಲಿ ಕೋರಿರುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಂಡು, ವರದಿ ಸಲ್ಲಿಸಲು ತಿಳಿಸಿದೆ.

ತಮ್ಮ ವಿಶ್ವಾಸಿ,

ಜಿಲ್ಲಾಧಿಕಾರಿಗಳ ಪರವಾಗಿ
ಬೆಂಗಳೂರು ಜಿಲ್ಲೆ, ಬೆಂಗಳೂರು.

**ಪ್ರತಿಯನ್ನು:** ಮುಖ್ಯ ಅಭಿಯಂತರರು, ರಸ್ತೆ ಮೂಲಭೂ ಸೌಕರ್ಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಹೊಸ ಅನೆಕ್ಸ್ ಕಟ್ಟಡ-3, 4ನೇ ಮಹಡಿ, ಎನ್.ಆರ್.ಚೌಕ, ಬೆಂಗಳೂರು-02

Scanned with CamScanner